**A**

**CCE RF/PF/RR/PR/NSR/NSPR**
**FULL SYLLABUS**

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

ಮಾರ್ಚ್/ಏಪ್ರಿಲ್ 2024 ರ ಪರೀಕ್ಷೆ - 1

**MARCH/APRIL 2024 EXAMINATION - 1**

# ಮಾದರಿ ಉತ್ತರಗಳು

# MODEL ANSWERS

ಸಂಕೇತ ಸಂಖ್ಯೆ : **33-K** CODE No. : **33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)

(Regular Fresh / Private Fresh / Regular Repeater / Private Repeater / NSR / NSPR)

ದಿನಾಂಕ : 06. 04. 2024 ] [ ಗರಿಷ್ಠ ಅಂಕಗಳು : 80

Date : 06. 04. 2024 ] [ Max. Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| I. | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | 4 × 1 = 4 |
| 1. | 'ಸವರ್ಣದೀರ್ಘ ಸಂಧಿ'ಗೆ ಉದಾಹರಣೆಯಾಗಿರುವ ಪದ<br>(ಎ) ರಾಜೇಂದ್ರ (ಬಿ) ಮರವನ್ನು<br>(ಸಿ) ಮಳೆಗಾಲ (ಡಿ) ಹಿಮಾಲಯ<br>*ಉತ್ತರ :* (ಡಿ) ಹಿಮಾಲಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | 'ಅನ್ವರ್ಥನಾಮ' ಪದವಿದು<br>(ಎ) ಕೆರೆ (ಬಿ) ಬೆಟ್ಟ<br>(ಸಿ) ಶಿಕ್ಷಕ (ಡಿ) ಮರ<br>**ಉತ್ತರ :** (ಸಿ) ಶಿಕ್ಷಕ | |
| 3. | 'ಪ್ರಥಮಾ ವಿಭಕ್ತಿ' ಪ್ರತ್ಯಯವಿದು<br>(ಎ) ಅಲ್ಲಿ (ಬಿ) ಉ<br>(ಸಿ) ಇಂದ (ಡಿ) ಅನ್ನು<br>**ಉತ್ತರ :** (ಬಿ) ಉ | |
| 4. | 'ಮರಗಾಲು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ತತ್ಪುರುಷ ಸಮಾಸ (ಬಿ) ಕರ್ಮಧಾರಯ ಸಮಾಸ<br>(ಸಿ) ಅಂಶಿ ಸಮಾಸ (ಡಿ) ಕ್ರಿಯಾ ಸಮಾಸ<br>**ಉತ್ತರ :** (ಎ) ತತ್ಪುರುಷ ಸಮಾಸ | |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 12 × 1 = 12 |
| 5. | ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು ?<br>**ಉತ್ತರ :**<br>ಬೇಡನು ಪ್ರಾಣಿಗಳನ್ನು ಕೊಲ್ಲಲು ವಿಷ ಸವರಿದ ಬಾಣಗಳನ್ನು ಸಿದ್ಧ ಮಾಡಿಕೊಂಡಿರುತ್ತಿದ್ದನು. | |
| 6. | ಸರ್ವಜ್ಞ ಹೇಳಿರುವಂತೆ ಕೋಟಿ ವಿದ್ಯೆಗಳಿಗಿಂತ ಮಿಗಿಲಾದ ವಿದ್ಯೆ ಯಾವುದು ?<br>**ಉತ್ತರ :**<br>ಸರ್ವಜ್ಞನ ಪ್ರಕಾರ ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಲೇಸು ಎಂದಿದ್ದಾರೆ. | |
| 7. | ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ ?<br>**ಉತ್ತರ :**<br>ಪುಟ್ಟರಾಜರು 'ಸ್ವದೇಶಿ ಆಂದೋಲನ'ಕ್ಕೆ ಕೈಜೋಡಿಸುವ ಸಲುವಾಗಿ ಖಾದಿ ಬಟ್ಟೆ ತೊಡಲು ನಿರ್ಧರಿಸಿದರು. | |
| 8. | ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು ?<br>**ಉತ್ತರ :**<br>ಹಕ್ಕಿಯ ದೇಹ ಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ-ಬೇಟೆ ಸಂಬಂಧಗಳು ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುತ್ತವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 9. | ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?<br>***ಉತ್ತರ :***<br>ಹಕ್ಕಿಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ ಮತ್ತು ವಿಜ್ಞಾನಿಯ ತಂತ್ರಜ್ಞಾನ ಸಮನ್ವಯಗೊಂಡಿದೆ. | |
| 10. | ಗುರುಗಳು ಹೇಳಿದಂತೆ ಕಾಫೀ ಮತ್ತು ಕಾಫೀಯ ಕಪ್ಪು ಯಾವುದರ ಪ್ರತೀಕಗಳಾಗಿವೆ ?<br>***ಉತ್ತರ :***<br>ಗುರುಗಳು ಹೇಳಿದಂತೆ ಕಾಫೀ ಎಂದರೆ ಜೀವನ. ಕಪ್ಪು ಎಂದರೆ ಹಣ, ಅಂತಸ್ತು, ಅಧಿಕಾರ ಇದ್ದ ಹಾಗೆ. | |
| 11. | ಕವಿ ಡಾ. ಬಸವರಾಜ ಸಬರದ ಅವರ ಪ್ರಕಾರ ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು ?<br>***ಉತ್ತರ :***<br>ಕವಿ ಡಾ. ಬಸವರಾಜ ಸಬರದ ಅವರ ಪ್ರಕಾರ ಕಾಡನ್ನು ಅಲೆದ ಸಿದ್ಧಾರ್ಥನಿಗೆ 'ನಾಡಿನರ್ಥ' ಹೊಳೆಯಿತು. | |
| 12. | ತಿಮಿರಕ್ಕೆ ವೈರಿ ಯಾವುದು ?<br>***ಉತ್ತರ :***<br>ತಿಮಿರಕ್ಕೆ ವೈರಿ ದೀಪ (ಬೆಳಕು) | |
| 13. | ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ ?<br>***ಉತ್ತರ :***<br>ಅಡಿಗರು ಹಗಲಿರುಳು ಹೆಗ್ಗುರಿಯ ಸಾಧನೆಗೆ ಹೋರಾಡಬೇಕೆಂದು ಹೇಳುತ್ತಾರೆ. | |
| 14. | ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?<br>***ಉತ್ತರ :***<br>ಜನಪದರು ತುಂಬಿದ ಕುಣಿಗಲ್ ಕೆರೆಯನ್ನು ನಿಂಬೆ ಹಣ್ಣಿಗೆ ಹೋಲಿಸಿದ್ದಾರೆ. | |
| 15. | ಅಕ್ಕಮಹಾದೇವಿಯ ಪ್ರಕಾರ ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಅಕ್ಕಮಹಾದೇವಿಯ ಪ್ರಕಾರ ಧನವಿದ್ದವರಲ್ಲಿ ದಯಾ ಗುಣ ಇರಬೇಕು ಎಂದು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 16. | ಅರ್ಜುನ ಉತ್ತರಕುಮಾರನಿಗೆ ಧುರಕೆ ಬೆನ್ನುಹಾಕಿದರೆ ಏನು ಪ್ರಾಪ್ತಿಯಾಗುತ್ತದೆ ಎಂದನು ?<br>**ಉತ್ತರ :**<br>ಧುರಕೆ ಬೆನ್ನುಹಾಕಿದರೆ ಪಾತಕವು (ಪಾಪ) ಪ್ರಾಪ್ತಿಯಾಗುತ್ತದೆ ಎಂದು ಅರ್ಜುನ ಉತ್ತರನಿಗೆ ಹೇಳಿದನು. | |
| **III.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | **8 × 2 = 16** |
| 17. | ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು ?<br>**ಉತ್ತರ :**<br>ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನೆಂದರೆ "ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ. ತನ್ನ ಹಸಿರು ಬಣ್ಣದಿಂದ ನನ್ನ ಮನಸ್ಸಿಗೆ ಮುದ ನೀಡಿದೆ, ನೆರಳು ನೀಡಿದೆ. ಆದರೆ ಈಗ ದುರದೃಷ್ಟದಿಂದ ಅದನ್ನು ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಹಾಗೆಂದು ಈ ಸ್ಥಿತಿಯಲ್ಲಿ ನಾನು ಅದನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಆ ಮರಕ್ಕೆ ಕೃತಘ್ನನಾಗಲಾರೆ. ನಾನು ಎಲ್ಲೋ ಹೋಗಿ ಆಹಾರ ಸಂಪಾದಿಸಿಕೊಂಡು ಬರುತ್ತೇನೆ. ಆದರೆ ವಾಸ ಮಾತ್ರ ಇಲ್ಲೆ ಎಂದಿತು. | |
| 18. | ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?<br>**ಉತ್ತರ :**<br>ಪುಟ್ಟಯ್ಯನವರು ಬಾಲ್ಯದಲ್ಲಿ ಹುಟ್ಟಿದ ಆರು ತಿಂಗಳು ಇರುವಾಗ ಕಣ್ಣಿನ ಬೇನೆ ಕಾಣಿಸಿಕೊಂಡಿತು. ಆ ಕಾಲದಲ್ಲಿ ನಾಟಿ ವೈದ್ಯರು ಇದ್ದರು. ಅವರು ಕಣ್ಣು ಗುಡ್ಡಿಗೆ ತೊನಸಿಯನ್ನು ಮುಟ್ಟಿಸಬೇಕು ಅಂತ ಹೇಳಿದ್ದರು. ಆಗ ಮುಟ್ಟಿಸುವಾಗ ತೊನಸಿ ಕೈಜಾರಿ ಕಣ್ಣು ಒಳಗೆ ಬಿದ್ದು ಬಿಟ್ಟವು. ಆವಾಗ ಅದು ಅರಿ ಹರಿಯುವ ಬದಲು ಗುಡ್ಡಿನ ಹರಿದು ಕಣ್ಣು ಹೋಗಿಬಿಟ್ಟವು. ಹೀಗೆ ಪುಟ್ಟಯ್ಯನವರು ಕಣ್ಣು ಕಳೆದುಕೊಂಡರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 19. | ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡು ಗೂಡುಕಟ್ಟುವುದಕ್ಕೆ ಲೇಖಕರು ಯಾವ ಉದಾಹರಣೆಗಳನ್ನು ನೀಡುತ್ತಾರೆ ? | |
| | ***ಉತ್ತರ :*** | |
| | ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದಿಕೊಂಡು ಗೂಡುಕಟ್ಟ ಬಲ್ಲವು. ಕೆಲವು ಹಕ್ಕಿಗಳು ಮನುಷ್ಯರಿರುವ ಕೇರಿಗಳಲ್ಲಿ ವಾಹನ ಸಂಚಾರ ಹೆಚ್ಚಿರುವ ಸ್ಥಳಗಳನ್ನೇ ಆಯ್ದುಕೊಳ್ಳುತ್ತವೆ. ಹಕ್ಕಿಗಳ ನೆಲೆಯನ್ನು ಅನೇಕ ಕಡೆ ಮಾನವ ಆಕ್ರಮಿಸಿಕೊಂಡ ನಂತರ ಹಲವಾರು ಹಕ್ಕಿಗಳು ಹೊಸ ಪರಿಸರಕ್ಕೆ ಥಟ್ಟನೆ ಹೊಂದಿಕೊಂಡವು. ಹಾಗಾಗಿ ನಾವೀಗ ಟ್ರಾನ್ಸ್‌ಫಾರ್ಮರ್ ಬಳಿ, ಮೀಟರ್ ಪೆಟ್ಟಿಗೆಯಲ್ಲಿ ಅಷ್ಟೇ ಏಕೆ ವಿದ್ಯುತ್ ತಂತಿಗಳಲ್ಲಿ ತೂಗಾಡುವ ಗೂಡುಗಳನ್ನು ಕಾಣುತ್ತಿದ್ದೇವೆ. | |
| 20. | ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು ? | |
| | ***ಉತ್ತರ :*** | |
| | ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ಹೀಗೆ ಹೇಳಿದರು. "೧೬೬೬ ರಲ್ಲಿ ಲಂಡನ್‌ನಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿತು. ಆಗ ೩ ದಿನ ಲಂಡನ್ ಹೊತ್ತಿ ಉರಿಯಿತಂತೆ. ೧೩,೦೦೦ ಮನೆಗಳು, ೮೦ ಚರ್ಚ್‌ಗಳು ಸುಟ್ಟುಹೋದವಂತೆ. ಇದರ ನೆನಪಿಗಾಗಿ ೨೦೦ ಅಡಿ ಎತ್ತರದ ಸ್ತಂಭ ನಿಲ್ಲಿಸಿದ್ದಾರಂತೆ. ಅದಕ್ಕಿಂತ ಒಂದೆರಡು ವರ್ಷಗಳ ಹಿಂದೆ ಪ್ಲೇಗ್ ರೋಗ ಬಂದು ಹನ್ನೆರಡು-ಹದಿಮೂರು ಸಾವಿರ ಜನ ಸತ್ತು ಹೋದರಂತೆ" ಎಂದು ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದನು. | |
| 21. | ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ ? | |
| | ***ಉತ್ತರ :*** | |
| | ಲಂಡನ್ ಬ್ರಿಜ್‌ಗೆ ಹತ್ತಿರದಲ್ಲೇ ಟವರ್ ಆಫ್ ಲಂಡನ್ ನೋಡಿದೆವು. ಇದು ೩-೪ ಅಂತಸ್ತಿನ ಚೌಕಾಕಾರದ ಬೃಹತ್ ಕಟ್ಟಡದ ಮೇಲೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಟವರ್‌ಗಳಿವೆ. ಇದು ರಾಜರು ತಮಗೆ ಆಗದವರನ್ನು ಕೊಲ್ಲಿಸಿದ ಜಾಗ. ರಾಜಮನೆತನಗಳಲ್ಲಿನ ವೈಷಮ್ಯ, ಅಸೂಯೆ, ಕೊಲೆ, ಸುಲಿಗೆಗಳ ತಾಣವಿದು. ರಾಬರ್ಟ್ ಕ್ಲೈವ್ ೧೭೫೭ ರ ಪ್ಲಾಸಿ ಕದನದಲ್ಲಿ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳನ್ನು ಇಲ್ಲಿ ಇಡಲಾಗಿದೆಯಂತೆ. ಆದ್ದರಿಂದ ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಕರೆಯುತ್ತಾರೆ. | |
| 22. | ಬಸವಣ್ಣನವರು ಜನರ ಮೌಢ್ಯತೆಯನ್ನು ಯಾವ ರೀತಿ ಖಂಡಿಸಿದ್ದಾರೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಬಸವಣ್ಣನವರು ತಮ್ಮ ವಚನದಲ್ಲಿ ಜನರ ಹಾಗೂ ಸಮಾಜದಲ್ಲಿನ ಮೌಢ್ಯತೆಯನ್ನು ಈ ರೀತಿ ಖಂಡಿಸಿದ್ದಾರೆ. ಜನರು ನೀರ ಕಂಡಲ್ಲಿ ಮುಳುಗುತ್ತಾರೆ. ಮರವನ್ನು ಕಂಡರೆ ಸುತ್ತುತ್ತಾರೆ. ಬತ್ತುವ ಜಲವ ಒಣಗುವ ಮರವನ್ನು ನಂಬುವ ಈ ಜನ ದೇವರ ಇರುವಿಕೆಯನ್ನು ಮರೆತು ಮರವನ್ನು ಸುತ್ತುತ್ತಾ ನದಿಯಲ್ಲಿ ಮುಳುಗುವ ಜನರು ದೇವರ ಅರಿವನ್ನು ಪಡೆಯುವ ಮೂಲಕ ತಮ್ಮ ಮೌಢ್ಯತೆಯನ್ನು ದೂರಮಾಡಬೇಕೆಂದು ಬಸವಣ್ಣನವರು ಈ ವಚನದಲ್ಲಿ ತಿಳಿಸಿದ್ದಾರೆ. | |
| 23. | ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು ಎಂಬುದನ್ನು ವಿವರಿಸಿ.<br>***ಉತ್ತರ :***<br>ಮಗು ಮಲಗಿದ್ದ ಹಾಸಿಗೆಯು ತನ್ನ ಮನೆಯಿಂದ ಕದ್ದತಂದ ವಸ್ತು ಎಂದು ತಿಳಿದಾಗ ಕೋಪಗೊಳ್ಳದೇ ತನ್ನ ವೃತ್ತಿ ಧರ್ಮಕ್ಕನುಸಾರ ಮಗುವಿನ ಪ್ರಾಣವನ್ನು ಉಳಿಸಲು ಮುಂದಾದರು. ಮಗುವಿನ ನಾಡಿಯನ್ನು ಹಿಡಿದು ನೋಡಿದರು. ಜ್ವರದ ರೀತಿಯನ್ನು ಪರೀಕ್ಷಿಸಿ, ಗುರುತಿಸಿದರು. ತಂದೆ–ತಾಯಿಗೆ ಧೈರ್ಯ ಹೇಳಿದರು. ಔಷಧಿಯ ಮಾತ್ರೆಯನ್ನು ಮಗುವಿಗೆ ಕುಡಿಸಿದರು. ಯಾವುದೋ ಸೊಪ್ಪು ಬೇಕಾಯಿತು. ಆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕತ್ತಲೆಯ ರಾತ್ರಿಯಲ್ಲೇ ಕಾಡಿಗೆ ಹೋಗಿ ಕಲ್ಲುಮುಳ್ಳು ಲೆಕ್ಕಿಸದೇ ಅಲೆದಾಡಿ ಹುಡುಕಿ ತಮಗೆ ಬೇಕಾದ ಸೊಪ್ಪು ತಂದು ಅರೆದು ರಸ ಮಾಡಿ ಕುಡಿಸಿದರು. ಸ್ವಲ್ಪ ಲೇಹವನ್ನು ಹಣೆಗೆ ಬಳಿದರು. ಹೀಗೆ ಮಾಡಿ ಮಗುವಿನ ಪ್ರಾಣವನ್ನು ಉಳಿಸಿದರು. | |
| 24. | ನಾಗರೀಕತೆಯ ಬೆಳವಣಿಗೆಯ ಬಗ್ಗೆ ಕವಯತ್ರಿಗೆ ಯಾವ ಅಳುಕು ಇದೆ ಎಂಬುದನ್ನು ಉದಾಹರಣೆಯೊಂದಿಗೆ ಬರೆಯಿರಿ. | |
| | ***ಉತ್ತರ :*** | |
| | ಕವಯಿತ್ರಿ ಡಾ. ಎಚ್.ಎಲ್. ಪುಷ್ಪರವರ ಪ್ರಕಾರ ನಾಗರೀಕತೆ ಬೆಳೆದಂತೆ ಇವರಿಗೆ ಇರುವ ಅಳುಕೆಂದರೆ ಜನರ ಮೂಲಭೂತ ಅವಶ್ಯಕತೆಗಳಾದ ನೀರು, ಆಹಾರ, ಗಾಳಿ, ಮನೆಕಟ್ಟಲು ಭೂಮಿ ಮುಂತಾದ ಎಲ್ಲವನ್ನು ತಿಂದು ತೇಗಿದ್ದಾನೆ. ಹಾಗೆ ಜನರ ಬಗೆ ಬಗೆಯ ಕಾರೇನು, ಪಟಪಟ ಮೋಟಾರುಗಳೇನು ? ಆಕಾಶದಲ್ಲಿ ಲೋಹದ ಹಕ್ಕಿಯ ಹಾರಾಟವೇನು ? ಈ ಎಲ್ಲಾ ಸುಖಜೀವನದಿಂದಾಗಿ ಭೂಮಿಯಲ್ಲಿ ಸಿಗುವ ನೈಸರ್ಗಿಕ ಸಂಪನ್ಮೂಲಗಳು ಇಂಧನ ತೀರುತ್ತಲಿದೆ. ಹಾಗಾಗಿ ಮುಂದಿನ ಪೀಳಿಗೆಯ ಮಾನವರ ಬದುಕು ನಾಳೆ ಏನೋ ಹೇಗೋ ಎಂಬ ಅಳುಕನ್ನು ಕವಯಿತ್ರಿ ತಮ್ಮ ಪದ್ಯದಲ್ಲಿ ತಿಳಿಸಿದ್ದಾರೆ. | |
| **IV.** | **ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | *ಕುಮಾರವ್ಯಾಸ:* | |
| | ***ಉತ್ತರ :*** | |
| | ಕುಮಾರವ್ಯಾಸ ಇವರ ನಿಜನಾಮ ನಾರಣಪ್ಪ. ಇವರು ಕ್ರಿ.ಶ. ಸುಮಾರು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ೧೪೩೦ ರಲ್ಲಿ ಗದುಗಿನ ಕೋಳಿವಾಡದಲ್ಲಿ ಜನಿಸಿದರು. ಇವರು 'ಕರ್ಣಾಟ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ' ಎಂಬ ಶ್ರೇಷ್ಠಕಾವ್ಯವನ್ನು ಬರೆದಿದ್ದಾರೆ. 'ಐರಾವತ' ಕೃತಿಯೂ ಇವರದೆಂದು ಹೇಳಲಾಗಿದೆ. ವ್ಯಾಸರು ಸಂಸ್ಕೃತದಲ್ಲಿ ರಚಿಸಿರುವ 'ಮಹಾಭಾರತ'ವನ್ನು ನಾರಣಪ್ಪನು ಕನ್ನಡದಲ್ಲಿ ಬರೆದವನಾದುದರಿಂದ 'ಕುಮಾರವ್ಯಾಸ'ನೆಂಬ ಅಭಿದಾನವನ್ನು ಹೊಂದಿದ್ದಾನೆ. ಕಾವ್ಯದ ಉದ್ದಕ್ಕೂ ರೂಪಕಾಲಂಕಾರವನ್ನು ಬಹಳವಾಗಿ ಬಳಸಿದವನಾದುದರಿಂದ ಈತನನ್ನು 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ಕರೆಯಲಾಗುತ್ತದೆ. | |
| V. | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಪಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 26. | ಹಸಿಸೌದೆ ಬುಸುಗುಟ್ಟಿ ದನಿಯನೆತ್ತುವುದಲ್ತೆ<br>ಕಿಡಿ ಸೋಕೆ ಮದ್ದು ಸಿಡಿದಬ್ಬರಿಪುದು<br>ಅಂತಿರದೆ ರವಿಕರಕೆ ಕರಗುವಿಬ್ಬನಿವೊಲಿರು;<br>ಸಿಡುಕು ಮಿಡುಕನು ತೊರೆದು ಮೌನಿಯಾಗು !<br>***ಉತ್ತರ :***<br>ಈ ಪದ್ಯಭಾಗವನ್ನು ಸಿ.ಪಿ.ಕೆ. ಅವರು ಬರೆದಿರುವ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಆಡಂಬರ,ಪ್ರದರ್ಶನ ಇವುಗಳಿಗೆ ಮನಸೋಲುವುದು ಸಾಮಾನ್ಯ. ಸಂಪತ್ತು, ಹೆಸರು, ಕೀರ್ತಿ ಇವುಗಳನ್ನು ಪಡೆಯುವುದೇ ಜೀವನದ ಸಾರ್ಥಕ್ಯವೆಂದು ಬಹಳಷ್ಟು ಮಂದಿ ತಿಳಿಸಿದ್ದಾರೆ. ಆದರೆ ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯು ಯಾವುದೇ ಸದ್ದು ಗದ್ದಲವಿಲ್ಲದೆ ತನ್ನೆಲ್ಲಾ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಲೇ ಇದೆ. ಹಸಿಸೌದೆಯಿಂದ ಬರೀ ಶಬ್ದ ಬರುವುದೇ ಹೊರತು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬೆಂಕಿ ಬರುವುದಿಲ್ಲ ಇದು ಬುಸುಗುಟ್ಟು ಜೋರಾಗಿ ದನಿಯನೆತ್ತುತ್ತದೆ. ಕಿಡಿ ಸೋಕಿದಾಗ ಮದ್ದು ಸಿಡಿದು ಅಬ್ಬರಿಸುತ್ತದೆ. ರವಿಯ ಕಿರಣಕ್ಕೆ ಇಬ್ಬನಿ ಕರಗುವಂತೆ, ಕತ್ತಲೆ ದೀಪದ ಎದುರು ಮೌನವಾಗಿ ಸರಿಯುವಂತೆ ಮಾನವ ಸಿಡುಕು ಮಿಡುಕನ್ನು ತೊರೆದು ಮೌನವಾಗಿ ಬಾಳಬೇಕು ಎಂಬ ಸಂದೇಶವನ್ನು ಸಿ.ಪಿ. ಕೃಷ್ಣಕುಮಾರ್‌ರವರು ತಮ್ಮ ಪದ್ಯದಲ್ಲಿ ತಿಳಿಸಿದ್ದಾರೆ. | |
| VI. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 27. | "ಮಗುವಿನ ಮುಖವು ಚಂದ್ರನಂತೆ ಮನೋಹರವಾಗಿದೆ."<br>***ಉತ್ತರ :***<br>*ಅಲಂಕಾರದ ಹೆಸರು :* ಉಪಮಾಲಂಕಾರ<br>*ಲಕ್ಷಣ :* ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.<br>*ಉಪಮೇಯ :* ಮಗುವಿನ ಮುಖ<br>*ಉಪಮಾನ :* ಚಂದ್ರ<br>*ಉಪಮಾವಾಚಕ :* ಅಂತೆ<br>*ಸಮಾನಧರ್ಮ :* ಮನೋಹರತೆ<br>*ಸಮನ್ವಯ :* ಈ ವಾಕ್ಯದಲ್ಲಿ 'ಮಗುವಿನ ಮುಖ' ಎಂಬ ಉಪಮೇಯವನ್ನು 'ಚಂದ್ರ' ಎಂಬ ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ 'ಮನೋಹರತೆ' ಎಂಬ ಸಮಾನಧರ್ಮದೊಂದಿಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರಕ್ಕೆ ಉದಾಹರಣೆಯಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **VII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ-ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | "ಗಿಡವಾಗಿ ಬಗ್ಗದ್ದು ; ಮರವಾಗಿ ಬಗ್ಗೀತೆ."<br>**ಅಥವಾ**<br>"ಶಕ್ತಿಗಿಂತ ಯುಕ್ತಿ ಮೇಲು." | |
| **VIII.** | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **5 × 3 = 15** |
| | ಕೃತಿ, ಕರ್ತೃ ಮತ್ತು ಪಠ್ಯದ ಹೆಸರು | 1 ಅಂಕ |
| | ಯಾರು-ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 29. | "ಪೆನ್ನು ಖಡ್ಗಕ್ಕಿಂತ ಹರಿತ."<br>***ಉತ್ತರ :***<br>ಈ ವಾಕ್ಯವನ್ನು ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮಿಗಳು ಬರೆದಿರುವ 'ವ್ಯಕ್ತಿತ್ವ' ಪ್ರಬಂಧ ಸಂಕಲನದಿಂದ ಆಯ್ದ 'ಅಸಿ-ಮಸಿ-ಕೃಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದ.<br>ಈ ಮಾತನ್ನು ಲೇಖಕರು ಮಸಿಯ ಬಗ್ಗೆ ಹೇಳುವಾಗ ಈ ಮಾತು ಬಂದಿದೆ. ರಕ್ಷಣೆಗಿಂತ ಪ್ರಮುಖವಾದುದು ಮಸಿ. ಶಿಕ್ಷಣ ಎಂದರೆ ಸಾಹಿತ್ಯರಚನೆ. 'ಪೆನ್ನು ಖಡ್ಗಕ್ಕಿಂತ ಹರಿತ' ಎನ್ನುವ ಗಾದೆಯ ಮಾತಿನಂತೆ ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಅಂದರೆ ಬರವಣಿಗೆ ಅಷ್ಟೊಂದು ಪರಿಣಾಮಕಾರಿಯಾದುದು. ಪತ್ರಿಕೆಯ ಒಂದು ಲೇಖನ,ಕಾದಂಬರಿ, ಕಥೆ, ಕವನ, ಹಲವರ ಬದುಕನ್ನು ಬದಲಾಯಿಸಬಲ್ಲದು. ಒಂದು ಸರ್ಕಾರ ಉರುಳಿಸಿ ಮತ್ತೊಂದು ಸರ್ಕಾರ ತರಬಲ್ಲದು. ಎನ್ನುವುದರೊಂದಿಗೆ ಬರವಣಿಗೆ ಹೆಚ್ಚು ಶಕ್ತಿಶಾಲಿಯಾದುದು ಎನ್ನುವ ಸ್ವಾರಸ್ಯದ ಮಾತುಗಳು ಇಲ್ಲಿ ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 30. | "ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ."<br>***ಉತ್ತರ :***<br>ಈ ವಾಕ್ಯವನ್ನು ಡಾ. ಗುರುರಾಜ ಕರ್ಜಗಿಯವರು ಬರೆದ 'ಕರುಣಾಳು ಬಾ ಬೆಳಕೆ' ಪುಸ್ತಕದಿಂದ ಆಯ್ದ 'ಕಾಫೀ ಕಪ್ಪು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಗುರುಗಳು ತಮ್ಮ ಹಳೆಯ ವಿದ್ಯಾರ್ಥಿಗಳಿಗೆ ಹೇಳಿದ ಮಾತು ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವುದು ಈ ಕಾಫೀ ಮಾತ್ರ ಕಪ್ಪುಗಳನ್ನಲ್ಲ. ಅವನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಿ ಅಲಂಕಾರಗಳ ಬೆನ್ನತ್ತಿ ಓಡಿಓಡಿ, ಜೀವನವನ್ನು ಮರೆಯಬೇಡಿ. ಸಂತೋಷವಾಗಿರುವವರಿಗೆ ಜೀವನದಲ್ಲಿ ಎಲ್ಲವೂ ಚೆನ್ನಾಗಿರುವುದು ಸಿಕ್ಕಿರಲಿಕ್ಕಿಲ್ಲ. ಆದರೆ ಸಿಕ್ಕಿರುವುದನ್ನು ಹೇಗೆ ಚೆನ್ನಾಗಿ ಆಸ್ವಾದಿಸಬೇಕು ಎನ್ನುವುದು ಗೊತ್ತಿದೆ. ಕಪ್ಪುಗಳ ಚಿಂತೆ ಬೇಡ ಕಾಫಿ ಆಸ್ವಾದಿಸಿ ಎನ್ನುತ್ತಾ ಜೀವನವನ್ನು ಹೇಗೆ ಸಾಗಿಸಬೇಕು ಎನ್ನುವ ಸ್ವಾರಸ್ಯಕರ ಮಾತುಗಳು ಇಲ್ಲಿ ವ್ಯಕ್ತವಾಗಿದೆ. | |
| 31. | "ಗೊತ್ತು ಗುರಿ ಇಲ್ಲದೆ ಕತ್ತಲಲ್ಲಿ ನಡೆದನು."<br>***ಉತ್ತರ :***<br>ಈ ವಾಕ್ಯವನ್ನು ಡಾ. ಬಸವರಾಜ ಸಬರದ ಅವರು ರಚಿಸಿದ 'ಪದಕಟ್ಟಿ ಹಾಡೇನ' ಎಂಬ ಕೃತಿಯಿಂದ ಆಯ್ದ 'ಬೋಧಿವೃಕ್ಷದ ಹಾಡು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಕವಿ ಹೇಳಿದ್ದಾರೆ. ಸಿದ್ಧಾರ್ಥನು ತನ್ನ ಮೂವತ್ತನೆಯ ವಯಸ್ಸಿನವರೆಗೂ ಅರಮನೆಯಲ್ಲೇ ಸುಖದಿಂದ ಕಾಲ ಕಳೆದ. ಇವನು ಒಂದು ದಿನ ತನ್ನ ರಾಜ್ಯವನ್ನು ನೋಡಲು ಹೊರಟ ಸಿದ್ಧಾರ್ಥನಿಗೆ ಜಗತ್ತಿನಲ್ಲಿ ಆಗುವ ಘಟನೆಗಳನ್ನು ಕಂಡು ದುಃಖಪಡುತ್ತಾನೆ. ಇದಕ್ಕೆ ಕಾರಣಗಳನ್ನು ತನ್ನ ಅರಮನೆಯ ಪಂಡಿತರನ್ನು ಕೇಳುತ್ತಾನೆ. ಅವರು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನೀಡುವ ಉತ್ತರ ಇವನಿಗೆ ಸಮಾಧಾನ ತರಲಿಲ್ಲ. ಹಾಗಾಗಿ ಜಗತ್ತಿನ ಜನರ ಕಷ್ಟಗಳಿಗೆ ನೋವುಗಳಿಗೆ ಉತ್ತರ ಕಂಡುಹಿಡಿಯಲು ಅವನು ನಿರ್ಧರಿಸಿ, ಒಂದು ದಿನ ಮಧ್ಯರಾತ್ರಿ ತನ್ನ ಪತ್ನಿ, ಮಗು, ಅರಮನೆಯ ಮೋಹ ಎಲ್ಲವನ್ನು ಬಿಟ್ಟು ಕತ್ತಲಲ್ಲಿ ನಡೆದು ಕಾಡಿನಲ್ಲಿ ಅನೇಕ ತಪಸ್ವಿಗಳ ಬಳಿ ತನ್ನ ಸಮಸ್ಯೆಯ ಉತ್ತರಕ್ಕಾಗಿ ಗೊತ್ತುಗುರಿಯು ಇಲ್ಲದಂತೆ ಕಾಡಿನಲ್ಲಿ ಅಲೆಯುತ್ತಾನೆ. ಇಲ್ಲಿ ಸಿದ್ಧಾರ್ಥನು ಮಾನವರ ಬದುಕಿನ ಸುಖ-ದುಃಖಗಳಿಗೆ ಕಾರಣ ಕಂಡುಕೊಳ್ಳುವ ಪ್ರಯತ್ನದ ಸ್ವಾರಸ್ಯದ ಮಾತುಗಳು ಇಲ್ಲಿ ವ್ಯಕ್ತವಾಗಿದೆ. | |
| 32. | "ಒಂದು ಜೀವನಕೇಕೆ ಹಲವು ಸಾಧ್ಯಗಳು ?"<br>***ಉತ್ತರ :***<br>ಈ ವಾಕ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರು ಬರೆದ 'ಸಮಗ್ರಕಾವ್ಯ' ಕೃತಿಯಿಂದ ಆಯ್ದ 'ಗುರಿ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಕವಿ ಹೇಳಿದ್ದಾರೆ. ಗುರಿ ಸಾಧನೆಯ ಮಾರ್ಗದಲ್ಲಿ ಹಲವಾರು ಕಷ್ಟ-ನಷ್ಟಗಳು ಎದುರಾಗಬಹುದು. ಅವುಗಳಿಗೆ ಧೃತಿಗೆಡದೆ. ಆತ್ಮವಿಶ್ವಾಸದಿಂದ ಮುಂದೆ ಸಾಗಬೇಕು. ಜೀವನದಲ್ಲಿ ಹಲವಾರು ಗುರಿಗಳನ್ನು ಇಟ್ಟುಕೊಂಡರೆ ಯಶಸ್ಸು ಕಾಣಲು ಸಾಧ್ಯವಿಲ್ಲ. ಬದುಕಿಗೊಂದು ಗುರಿ ಇಲ್ಲದಿದ್ದರೆ. ಎಲ್ಲಿಗೆ ಹೋಗಬೇಕು ಎಂಬುದು ತಿಳಿಯದಾಗುತ್ತದೆ. ಹಾಗೆ ಒಂದು ಬಾಣಕ್ಕೆ ಒಂದು ಗುರಿಯಿರುವಂತೆ, ಒಂದು ದೇಹಕ್ಕೆ ಒಂದು ಆತ್ಮವಿರುವಂತೆ, ಜೀವನಕ್ಕೆ ಒಂದು ಗುರಿ ಇರಬೇಕು. ಜೀವನದಲ್ಲಿ ಹಲವಾರು ಗುರಿಗಳನ್ನು ಇಟ್ಟುಕೊಂಡರೆ ಗುರಿ ಸಾಧನೆ ಸಾಧ್ಯವಿಲ್ಲ. ಒಂದು ಜೀವನಕೇಕೆ ಹಲವು ಸಾಧ್ಯಗಳು ಒಂದೇ ಹೆಗ್ಗುರಿಗೆ ಹಗಲಿರುಳು ಹೋರಾಡಬೇಕೆಂದು, ಅದನ್ನು ಸಾಧಿಸಲು ಸತತ ಪ್ರಯತ್ನಶೀಲರಾಗಬೇಕು ಎನ್ನುವ ಸ್ವಾರಸ್ಯದ ಮಾತು ಇಲ್ಲಿ ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 33. | "ಬೊಬ್ಬೆ ಹೊಡೆದಾವೆ ಬಾಳೆಮೀನು."<br>***ಉತ್ತರ :***<br>ಈ ವಾಕ್ಯವನ್ನು ಜನಪದರು ಹಾಡಿರುವ ಮತಿಘಟ್ಟ ಕೃಷ್ಣಮೂರ್ತಿಯವರು ಸಂಗ್ರಹಿಸಿರುವ 'ಕನ್ನಡ ಜನಪದ ಸಾಹಿತ್ಯ ಭಂಡಾರ' ಸಂಪುಟ-೧ ಪುಸ್ತಕದಿಂದ ಆಯ್ದ 'ಮೂಡಲ್ ಕುಣಿಗಲ್ ಕೆರೆ' ಎಂಬ ಜನಪದಗೀತೆಯಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಜನಪದರು ಹೇಳಿದ್ದಾರೆ. ಕುಣಿಗಲ್ ಕೆರೆಯ ಅಕ್ಕಪಕ್ಕದ ಜನರು ಕೃಷಿಯ ಕೆಲಸದ ಜೊತೆ ಮೀನುಗಾರಿಕೆ ಮಾಡುತ್ತಾರೆ. ಕೃಷಿಕರ ಮುಖ್ಯ ಕಸುಬು ಕೃಷಿ ಉಪಕಸುಬು ಮೀನುಗಾರಿಕೆ ಆಗಿದೆ. ಕೃಷಿಕರು ಮೀನು ಹಿಡಿಯಲು ಬಲೆಹಾಕಿದಾಗ, ಮೀನುಗಾರರ ಬಲೆಯಲ್ಲಿ ಸಿಕ್ಕ ಬಾಳೆ ಮೀನುಗಳು ಬೊಬ್ಬೆ ಹಾಕುತ್ತವೆ. ಬಲೆಯಲ್ಲಿ ಸಿಕ್ಕ ಮೀನುಗಳನ್ನು ನೀರಿನಿಂದ ಮೇಲಕ್ಕೆತ್ತಿದಾಗ ಆ ಮೀನುಗಳು ಒದ್ದಾಡುವ ಪರಿಯನ್ನು ಜನಪದರು ಬೊಬ್ಬೆ ಹೊಡೆದಾವೆ ಎಂದು ಹೇಳಿದ್ದಾರೆ. ಇಲ್ಲಿ ಕೃಷಿಕರ ಉಪಕಸುಬುಗಳ ಬಗ್ಗೆ ಹಾಗೂ ಕೆರೆಯ ಬಗ್ಗೆ ವರ್ಣಿಸುವ ಸ್ವಾರಸ್ಯದ ಮಾತು ಇಲ್ಲಿ ವ್ಯಕ್ತವಾಗಿದೆ. | |
| **IX.** | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | **1 × 4 = 4** |
| 34. | ಕೊರಡ ಕೊನರಿಸಿ ..............................................<br>.................................................................<br>.................................................................<br>.................................................. ಮತ್ತೇರಿದೆ.<br>**ಅಥವಾ**<br>ಯುಗದ ಹಿಂದಿನ .............................................<br>.................................................................<br>.................................................................<br>................................................ ಸವಿಚೈತ್ರವು.<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು<br>ಬರಡು ಜೀವಕೆ ಹೊಸತು ಚೈತನ್ಯವು<br>ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ<br>ಚಿಲಿಪಿಲಿಯ ಕಲರವಕೆ ಮತ್ತೇರಿದೆ.<br>**ಅಥವಾ**<br>ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ<br>ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ<br>ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ<br>ಎಲ್ಲರೆದೆಗಳ ತುಂಬ ಸವಿಚೈತ್ರವು. | |
| **X.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 35. | ಗೋಪಾಲ ಮತ್ತು ಬನದ ಗೋಪಾಲನ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವನ್ನು ನೀವು ಮೆಚ್ಚುವ ಮಾತುಗಳಲ್ಲಿ ಬರೆಯಿರಿ.<br>**ಅಥವಾ**<br>ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.<br>***ಉತ್ತರ :***<br>ಸಂಜೆಯ ಸಮಯ ಗೋಪಾಲನು ಶಾಲೆಯಿಂದ ಹಿಂತಿರುಗಿ ಬರುವಾಗ ಕಾಡಿನ ಮರದಲ್ಲಿನ ಹೂವಿನ ಗೊಂಚಲು ನೋಡುತ್ತಾ ನಿಲ್ಲುತ್ತಾನೆ ಅಲ್ಲೇ ಇದ್ದ ನೇರಿಲ ಹಣ್ಣುಗಳನ್ನು ತಿನ್ನುತ್ತಾನೆ. ಆ ವೇಳೆಗೆ ಸೂರ್ಯ ಮುಳುಗುತ್ತಿರುವುದನ್ನು ನೋಡಿ ಭಯಗೊಂಡು. ತನ್ನ ತಾಯಿ ಹೇಳಿದ ಮಾತನ್ನು ನೆನಪಿಸಿಕೊಂಡು ಗೋಪಾಲಣ್ಣ ಎಂದು ಕರೆಯುತ್ತಾನೆ. ಯಾವುದೇ ಉತ್ತರಬರದೇ ಇರುವುದನ್ನು ನೋಡಿ ಭಯಗೊಂಡು ಮತ್ತೆ ಗೋಪಾಲಣ್ಣ! ಗೋಪಾಲಣ್ಣ! ಎಂದು ಕರೆಯುತ್ತಾನೆ. ಆಗ ಬನದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಗೋಪಾಲನು ಏನೋ ಗೋಪಾಲ ? ಎಂದು ಹೇಳುತ್ತಾನೆ. ಆಗ ಗೋಪಾಲನು ಎಲ್ಲಿದ್ದೀಯಾ ? ಹೆದರಿಕೆಯಾದರೆ ನಿನ್ನನ್ನು ಕರೆ ಎಂದು ಅಮ್ಮ ಹೇಳಿದ್ದಾಳೆ ಎಂದನು. ಆಗ ಬನದ ಗೋಪಾಲ, "ಹೆದರಬೇಡ ನಾನಿಲ್ಲಿಯೇ ಇದ್ದೇನೆ. ಧೈರ್ಯವಾಗಿ ಮನೆಗೆ ಹೋಗು" ಎಂದನು. ಆಗ ಗೋಪಾಲನು, "ಬಾ ಅಣ್ಣ ಮನೆಗೆ ಹೋಗೋಣ ನೀನು ಮನೆಗೆ ಬರುವುದಿಲ್ಲವೇ ? ಅಮ್ಮನ ನೋಡುವುದಕ್ಕೆ" ಎಂದನು ಆಗ ಬನದ ಗೋಪಾಲನು, "ತುಂಬಾ ಕೆಲಸದ ಮೇಲಿದ್ದೇನೆ, ಕಣೋ, ಈಗ ಬರುವುದಕ್ಕಾಗುವುದಿಲ್ಲ. ನೀನು ಹೋಗು, ನಾನು ಆಮೇಲೆ ಹಿಂದಿನಿಂದ ಬರುತ್ತೇನೆ. ಅಮ್ಮನಿಗೆ ಹೇಳು" ಎಂದನು. ಇಲ್ಲಿ ತಾಯಿಗೆ ದೇವರ ಮೇಲಿದ್ದ ನಂಬಿಕೆ ಹಾಗೂ ಮಗುವಿಗೆ ತಾಯಿಯ ಮಾತಿನ ಮೇಲಿದ್ದ ನಂಬಿಕೆ ಈ ಎರಡು ಸನ್ನಿವೇಶಗಳಲ್ಲಿ ತನ್ನ ಇಷ್ಟ ದೇವರನ್ನು ನಂಬಿದವರಿಗೆ ನಂಬಿಕೆ ಸುಳ್ಳಾಗದು ಎಂಬ ಮಾತು ಈ ನಾಟಕದಲ್ಲಿ ವ್ಯಕ್ತವಾಗಿದೆ.<br><br>**ಅಥವಾ**<br><br>ಗೋಪಾಲನ ತಾಯಿಯು ತನ್ನ ಮಗನನ್ನು ಬೆಳಗಾಯ್ತು ಮೇಲೇಳು, ಸೂರ್ಯನು ತೆಂಗಿನ ಮರದ ತುದಿಯಲ್ಲಿ ತೊಳಗುತ್ತಿದ್ದಾನೆ. ಬನದಿಂದ ಪೂಜೆಗೆ ಹೂಗಳು ತರಬೇಕು, ಶಾಲೆಗೆ ಹೊತ್ತಾದರೆ ಗುರುಗಳು ಏನೆಂದಾರೂ ಮೇಲೇಳು ಎಂದಾಗ ಅತ್ತ ಕಡೆಯಿಂದ ಗೋಪಾಲನು ಹೂವಿನ ಬುಟ್ಟಿಯನ್ನು ಹಿಡಿದು ಬಂದು, "ಕರೆದೆಯೇನಮ್ಮ ?" ಎಂದನು. ಆಗ ತಾಯಿಯು, "ಹೌದು ಮಗು ಮಲಗಿದ್ದೆಯೆಂದು ಕರೆದೆ ಎಲ್ಲಿಗೆ ಹೋಗಿದ್ದೆ ?" ಎಂದು ಕೇಳುತ್ತಾಳೆ ಆಗ ಗೋಪಾಲನು, "ನೋಡಿಲ್ಲಿ ! ಬೆಳಗ್ಗೆ ಬೇಗನೆ ಎದ್ದು ಸ್ನಾನ ಮಾಡಿ ನಿನಗೆ ಗೋಪಾಲನ ಪೂಜೆಗೆ ಬೇಕಾದ ಹೂವುಗಳನ್ನು ತರಲು ಬನಕ್ಕೆ ಹೋಗಿದ್ದೆ" ಎಂದನು. ಅಮ್ಮ ಬನದಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬಣ್ಣಬಣ್ಣದ ಹೂವುಗಳು, ನೂರಾರು ಹಕ್ಕಿಗಳ ಇಂಪಾದ ಗಾನ, ಸೂರ್ಯನ ಹೊಂಬೆಳಕು! ಹುಲ್ಲಿನ ಮೇಲಿನ ಹಿಮಮಣಿಗಳು! ಮನೆಗಿಂತ ಬನವೇ ಸೊಗಸು!" ಎಂದು ಹೇಳುತ್ತಾನೆ. ಆಗ ತಾಯಿಯು "ಹೂವುಗಳನ್ನು ಅಲ್ಲಿಟ್ಟು ಗಂಜಿಯುಂಡು ಶಾಲೆಗೆ ಹೋಗು ಹೊತ್ತಾಗುತ್ತದೆ" ಎಂದಾಗ, ಗೋಪಾಲನು "ರಾಮು, ಕಿಟ್ಟಿ, ನಾಣಿ, ಮಾಧು ಇವರೆಲ್ಲ ಆಳುಗಳ ಜೊತೆಯಲ್ಲಿ ಬರುತ್ತಾರೆ. ನನಗೆ ಮಾತ್ರ ಯಾರು ಇಲ್ಲ" ಎಂದಾಗ, ತಾಯಿಯು, "ನೋಡು ಅವರೆಲ್ಲಾ ಶ್ರೀಮಂತರ ಮಕ್ಕಳು, ಅವರಲ್ಲಿ ಸಾಕಷ್ಟು ಹಣವಿದೆ, ನಮಗೆಲ್ಲಿ ಬರಬೇಕು ? ನೀನೇ ಬಲ್ಲೆ, ಹೊಟ್ಟೆಗೆ ಹಿಟ್ಟು ಸಿಗುವುದೇ ಕಷ್ಟ. ನೂಲು ಮಾರಿ ಬಂದ ಮೂರು ಕಾಸಿನಲ್ಲಿ ನಮ್ಮ ಸಂಸಾರ ಸಾಗಬೇಕು. ಆ ಗೋಪಾಲ ಕೊಡಬೇಕು ನಾವು ಉಣಬೇಕು" ಎಂದು ತನ್ನ ಮಗುವನ್ನು ಸಂತೈಸಿ ಹೊಸ ಪಂಚೆಯನ್ನು ಕೊಟ್ಟು ಶಾಲೆಗೆ ಕಳುಹಿಸುತ್ತಾಳೆ. ಇಲ್ಲಿ ತಾಯಿಯ ಬಡತನದ ಬವಣೆಯ ನಡುವೆಯು ಮಗನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂಬ ತಾಯಿಯ ಹಂಬಲ ಈ ನಾಟಕದಲ್ಲಿ ಸೊಗಸಾಗಿ ವ್ಯಕ್ತವಾಗಿದೆ. | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** **(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | **1 × 4 = 4** **( 2 + 2 )** |
| 36. | "ಪುಸ್ತಕಗಳು ಜ್ಞಾನ ಭಂಡಾರದ ಕೀಲಿಕೈ ಇದ್ದಂತೆ" ಎಂಬ ಮಾತು ಹಳೆಯದಾದರೂ ಅದು ಚಿರಂತನ ಸತ್ಯ. ಜಗತ್ತಿನ ಎಲ್ಲಾ ಕಾಲದ ಜ್ಞಾನಿಗಳು ತಮ್ಮ ಸಮಸ್ತ ಜ್ಞಾನವನ್ನು ಪುಸ್ತಕದ ರೂಪದಲ್ಲಿ ತಮ್ಮ ಹಾಗೂ ಮುಂದಿನ ಪೀಳಿಗೆಗೆ ಬಳುವಳಿಯಾಗಿ ಕೊಟ್ಟುಹೋಗಿರುತ್ತಾರೆ. ಎಲ್ಲರಿಗೂ ಎಲ್ಲಾ ಸಂದರ್ಭಗಳಲ್ಲೂ ನಿಲುಕಬಹುದಾದ ಅಮೂಲ್ಯ ಸಂಪತ್ತು ಇದು. ಈ ನಿಧಿಯ ಮೌಲ್ಯದ ಅರಿವು ಇದ್ದವರು ಅದನ್ನು ಬಾಚಿ ಬಳಿದುಕೊಂಡು ತಮ್ಮ ಅರಿವಿನ ಪರಧಿಯನ್ನು ವಿಸ್ತರಿಸಿ ಕೊಳ್ಳುತ್ತಲೇ ಬಂದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬೊಗಸೆಗಟ್ಟಲೆ ತುಂಬಿಕೊಂಡು ಎಷ್ಟು ಸವಿದರೂ ಎಂದು ಮುಗಿಯದ ಆಳವಾದ ಸಿಹಿನೀರಿನ ಕೊಳಗಳು ಈ ಪುಸ್ತಕಗಳು. ಅಜ್ಞರಿಗೆ ಪುಸ್ತಕಗಳಲ್ಲಿ ಅಡಗಿದ ನಿಧಿಯ ಅರಿವು ಇರುವುದಿಲ್ಲ. ತಾತ್ಕಾಲಿಕ ಸುಖ ಕೊಡುವಂತಹ ಹಣ, ವೈಭವ, ಅಂತಸ್ತು, ಕೀರ್ತಿ, ಅಧಿಕಾರ ಇತ್ಯಾದಿ ಅರ್ಥಹೀನ ಪ್ರಲೋಭನೆಗಳನ್ನು ಅವರು ಬೆನ್ನಟ್ಟುತ್ತಾರೆ. ಒಂದು ಒಳ್ಳೆಯ ಪುಸ್ತಕವು ಕಷ್ಟಕಾಲದಲ್ಲಿ ಸ್ನೇಹಿತನಾಗುತ್ತದೆ, ಸಮಸ್ಯೆಗಳಿಗೆ ಪರಿಹಾರ ಹೇಳುತ್ತದೆ. ಏಕಾಕಿತನದ ಭಾರವನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅದು ಎಂತಹ ಆಳವಾದ ದುಃಖವನ್ನೂ ಮರೆಯಲು ಸಹಾಯ ಮಾಡುತ್ತದೆ. ಪುಸ್ತಕಗಳಿಂದ ಈ ಎಲ್ಲಾ ಲಾಭಗಳನ್ನು ಹೊಂದಬೇಕಾದಲ್ಲಿ ವ್ಯಕ್ತಿ ಒಬ್ಬ ಸಹೃದಯಿಯಾಗಿರುವುದು ಅವಶ್ಯ. ಜೀವನದ ಬಗ್ಗೆ ರಚನಾತ್ಮಕ ದೃಷ್ಟಿಯುಳ್ಳ ಮೌಲ್ಯಗಳನ್ನು ಗೌರವಿಸುವ, ಒಳ್ಳೆಯದನ್ನು ಮತ್ತು ಸುಂದರವಾದುದನ್ನು ಪ್ರೀತಿಸುವ ಮನಸ್ಸು ಹಾಗೂ ಹೃದಯ ವ್ಯಕ್ತಿಗೆ ಇರಬೇಕು. ಅಂದಾಗಲೇ ಆತ ಪುಸ್ತಕಗಳನ್ನು ಓದುವ ಹಾಗೂ ಪ್ರೀತಿಸುವ ಮತ್ತು ಅವುಗಳಿಂದ ವ್ಯಕ್ತಿತ್ವವನ್ನು ಉನ್ನತಗೊಳಿಸಿಕೊಳ್ಳುವ ಸಾಧ್ಯತೆ ಇರುತ್ತದೆ.<br>***ಪ್ರಶ್ನೆಗಳು:***<br>ಅ) ಒಂದು ಒಳ್ಳೆಯ ಪುಸ್ತಕದಿಂದಾಗುವ ಪ್ರಯೋಜನಗಳೇನು?<br>ಆ) ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳುವುದು ಹೇಗೆ? ತಿಳಿಸಿ.<br>***ಉತ್ತರ :***<br>ಅ) ಒಂದು ಒಳ್ಳೆಯ ಪುಸ್ತಕವು ಕಷ್ಟಕಾಲದಲ್ಲಿ ಸ್ನೇಹಿತನಾಗುತ್ತದೆ, ಸಮಸ್ಯೆಗಳಿಗೆ ಪರಿಹಾರ ಹೇಳುತ್ತವೆ. ಏಕಾಕಿತನದ ಭಾರವನ್ನು ಗಣನೀಯವಾಗಿ ಕಡಿಮೆ ಮಾಡುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಅದು ಎಂತಹ ಆಳವಾದ ದುಃಖವನ್ನೂ ಮರೆಯಲು ಸಹಾಯ ಮಾಡುತ್ತವೆ. ಪುಸ್ತಕಗಳಿಂದ ಈ ಎಲ್ಲಾ ಲಾಭಗಳನ್ನು ಹೊಂದಬೇಕಾದಲ್ಲಿ ವ್ಯಕ್ತಿ ಒಬ್ಬ ಸಹೃದಯಿಯಾಗಿರುವುದು ಅವಶ್ಯ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಆ) ಜ್ಞಾನಿಗಳು ತಮ್ಮ ಸಮಸ್ತ ಜ್ಞಾನವನ್ನು ಪುಸ್ತಕದ ರೂಪದಲ್ಲಿ ತಮ್ಮ ಹಾಗೂ ಮುಂದಿನ ಪೀಳಿಗೆಗೆ ಬಳುವಳಿಯಾಗಿ ಕೊಟ್ಟು ಹೋಗಿರುತ್ತಾರೆ. ಎಲ್ಲರಿಗೂ ಎಲ್ಲಾ ಸಂದರ್ಭಗಳಲ್ಲೂ ನಿಲುಕಬಹುದಾದ ಅಮೂಲ್ಯ ಸಂಪತ್ತು ಇದು. ಈ ನಿಧಿಯ ಮೌಲ್ಯದ ಅರಿವು ಇದ್ದವರು ಅದನ್ನು ಬಾಚಿ ಬಳಿದುಕೊಂಡು ತಮ್ಮ ಅರಿವಿನ ಪರಧಿಯನ್ನು ವಿಸ್ತರಿಸಿ ಕೊಳ್ಳುತ್ತಲೇ ಬಂದಿದ್ದಾರೆ. ಬೊಗಸೆಗಟ್ಟಲೆ ತುಂಬಿಕೊಂಡು ಎಷ್ಟು ಸವಿದರೂ ಎಂದು ಮುಗಿಯದ ಆಳವಾದ ಸಿಹಿನೀರಿನ ಕೊಳಗಳು ಈ ಪುಸ್ತಕಗಳು. ಆದ್ದರಿಂದ ಪುಸ್ತಕಗಳನ್ನು ಓದುವುದರಿಂದ ತಮ್ಮ ಜ್ಞಾನದ ಪರಧಿ ವಿಸ್ತರಿಸಿಕೊಳ್ಳಬಹುದು. | |
| **XII.** | **ಪ್ರಬಂಧ ಬರವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 4 = 4** |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 37. | "ರಾಷ್ಟ್ರೀಯ ಹಬ್ಬಗಳ ಮಹತ್ವ." **ಅಥವಾ** "ಇಂದಿನ ದಿನಗಳಲ್ಲಿ ಮಣ್ಣಿನ ಸಂರಕ್ಷಣೆಯ ಅಗತ್ಯತೆ." | |
| **XIII.** | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 5 = 5** |
| 38. | ನಿಮ್ಮನ್ನು ಮಂಡ್ಯದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಧನ್ವೀರ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸುವ 'ವನಮಹೋತ್ಸವ' ಕಾರ್ಯಕ್ರಮಕ್ಕೆ ಸಸಿಗಳನ್ನು ನೀಡುವಂತೆ ಕೋರಿ ಅರಣ್ಯ ಇಲಾಖೆಯ ಅರಣ್ಯಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಸುಮ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆಯುವ 'ಪೋಷಕರ ಸಭೆ'ಗೆ ಬರುವಂತೆ ಕುಣಿಗಲ್‌ನ ಬನಶಂಕರಿ ನಗರದ ನಿವಾಸಿಯಾದ 'ಗಂಗಾಧರ' ಎಂಬ ಹೆಸರಿನ ತಂದೆಯವರಿಗೊಂದು ಪತ್ರವನ್ನು ಬರೆಯಿರಿ. | |
| | **ಉತ್ತರ :** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |